ಓ.ಎಸ್. ನಂ. 70/2021

ಪಿ.ಡಬ್ಲ್ಯೂ: 01 (Sakamma)

ದಿನಾಂಕಃ 23.08.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀಸವಾಲುಃ ಪ್ರತಿವಾದಿ ಪರ – ಶ್ರೀ RR ವಕೀಲರಿಂದ.

ಮರಣ ಶಾಸನ ಕರಿಯಣ್ಣನ ಹತ್ತಿರ ಇತ್ತು. ಸಾಕ್ಷಿ ಮುಂದುವರೆದು ಮಾರವ್ವ ಮೃತಪಟ್ಟ 12 ದಿನಕ್ಕೆ ಕರಿಯಣ್ಣನವರು ನನಗೆ ತಂದುಕೊಟ್ಟಿರುತ್ತಾರೆ. ಅವರ ಬಳಿ ಮರಣ ಶಾಸನ ಕೊಟ್ಟಿರುವ ಬಗ್ಗೆ ನನಗೆ ಅಜ್ಜಿ ತಿಳಿಸಿರುವುದಿಲ್ಲ. ಕರಿಯಣ್ಣನವರು ನಮಗೆ ಸಂಬಂಧಿಕರಲ್ಲ, ಒಂದೇ ಊರಿನವರು. ಮಾರವ್ವರವರು ಸಹಿ ಮಾಡುತ್ತಿದ್ದರೋ ಹೆಬ್ಬೆಟ್ಟು ಗುರುತು ಹಾಕುತ್ತಿದ್ದರೋ ನನಗೆ ಗೊತ್ತಿಲ್ಲ ಎಂದರೆ ಹೆಬ್ಬೆಟ್ಟು ಗುರುತು ಹಾಕುತ್ತಿದ್ದರು. ಆ ರೀತಿ ಯಾವ ದಾಖಲಾತಿಗೆ ಹೆಬ್ಬೆಟ್ಟು ಗುರುತು ಹಾಕಿದ್ದನ್ನು ನಾನು ನೋಡಿರುತ್ತೇನೆ ಎಂದರೆ ವಯೋ ಪಿಂಚಣಿಯನ್ನು ಪಡೆಯುವಾಗ ಹೆಬ್ಬೆಟ್ಟು ಗುರುತು ಹಾಕುವುದನ್ನು ನಾನು ನೋಡಿರುತ್ತೇನೆ. ಸದರಿ ಪಿಂಚಣಿಯನ್ನು ಅವರ ಓಬಳಾಪುರದಲ್ಲಿ ಪಡೆಯುತ್ತಿದ್ದರು. ಅದು ಅವರ ತವರು ಮನೆ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,

ಕೂಡ್ಲಿಗಿ.